

## ಸೂಪರ್ ಅಜ್ಜಿ!

ಬೆಂಗಳೂರು ಚಂದ್ರಾಲೇಔಟ್‌ನ ಕೆನರಾ ಬ್ಯಾಂಕ್ ಬಳಿಯಿರುವ ಸಿಗಂದೂರು ಖಾನಾವಳಿಯಲ್ಲಿ ರೊಟ್ಟಿ ತಟ್ಟುವ ಈ ಅಜ್ಜಿ ಹೆಸರು ಶಿವಮ್ಮ. ದಿನವೊಂದಕ್ಕೆ 200 ರಿಂದ 250 ರೊಟ್ಟಿಗಳನ್ನು ಪಟಪಟನೆ ಬಡಿಯುವ ಈ ಅಜ್ಜಿಯ ವಯಸ್ಸು 90! ಇಳಿ ವಯಸ್ಸಿನಲ್ಲಿ ಹುಮ್ಮಸ್ಸಿನಿಂದ ಅಜ್ಜಿ ರೊಟ್ಟಿ ತಟ್ಟುವುದನ್ನು ನೋಡುವುದೇ ಒಂದು ಖುಷಿ ವಿಚಾರ. ಗಟ್ಟಿಮುಟ್ಟಾಗಿರುವ ಈ ಅಜ್ಜಿ ಮರಿ ಮೊಮ್ಮಕ್ಕಳನ್ನು ಸಲೀಸಾಗಿ ಎತ್ತಿಕೊಳ್ಳುವುದರ ಜೊತೆಗೆ ಇನ್ನಿತರೆ ಕೆಲಸಗಳನ್ನೂ ತಾನೇ ಅಚ್ಚುಕಟ್ಟಾಗಿ ಮಾಡಿ ಮುಗಿಸುತ್ತಾರೆ. ಮುಪ್ಪಲ್ಲೂ ದಣಿವರಿಯದೆ ದುಡಿಯುತ್ತಾ ಎಲ್ಲರಿಗೂ ಮಾದರಿಯಾಗಿರುವ ಈ ಸೂಪರ್ ಅಜ್ಜಿಗೆ ದೊಡ್ಡ ಸಲಾಂ!

—ವಿದ್ಯಾ ಹಾಲಭಾವಿ, ಬೆಂಗಳೂರು





## ಹುತ್ತಕ್ಕೆ ಕಲ್ಲು ಮಂಟಪ

ಸಾಗರ—ಸೊರಬ ಮಧ್ಯೆ ಇರುವ ಐತಿಹಾಸಿಕ ಗ್ರಾಮ ಕೆಳದಿ. ಕೆಳದಿ ಅರಸರ ಮೊದಲ ರಾಜಧಾನಿ. ಇತ್ತೀಚೆಗೆ ಆ ಗ್ರಾಮದಲ್ಲಿನ ಭಕ್ತರು ಸೇರಿ ರಸ್ತೆ ಪಕ್ಕದಲ್ಲಿದ್ದ ಬೃಹತ್ ಹುತ್ತಕ್ಕೆ ಒಂದು ಆಕರ್ಷಣೀಯವಾದ, ನಯವಾದ ಎಂಟು ಕಂಬಗಳಿಂದ ಆವೃತ್ತಗೊಂಡ ಜೆಂಬಿಟ್ಟಿಗೆ ಕಲ್ಲಿನ ವಿಶಾಲ ಮಂಟಪ ಕಟ್ಟಿದ್ದಾರೆ. ಇದು ನೋಡಲು ಸುಂದರವಾಗಿದ್ದು, ನೋಡುಗರ ಕಣ್ಮನ ಸೆಳೆಯುತ್ತದೆ. ಒಂದು ಕ್ಷಣ ನಿಂತು ನೋಡಿದರೆ ಪುರಾತನ ಮಂಟಪದಂತೆ ಆಕರ್ಷಣೀಯವಾಗಿ ಕಾಣುತ್ತದೆ.

—ರಾಮಕೃಷ್ಣ ಗೋಖಲೆ, ಸೊರಬ



## ಗಿಡಕ್ಕೆ ಮಾತ್ರೆ ಪುಷ್ಟಿಯೇ?

ಕೆಲವರು ಮನೆಯಲ್ಲಿ ಮಾಡುವ ಕಾಫಿ ಅಥವಾ ಚಹಾವನ್ನು ಕುದಿಸಿ ಸೋಸಿದಾಗ ಜರಡಿಯಲ್ಲಿ ಉಳಿದ ಪುಡಿಯನ್ನು ಮನೆಯಲ್ಲಿ ಕುಂಡದಲ್ಲಿ ಬೆಳೆಸಿದ ಆಲಂಕಾರಿಕ ಗಿಡಗಳ ಬುಡಕ್ಕೆ ಹಾಕುವುದನ್ನು ಗಮನಿಸಿದ್ದೆ. ಆದರೆ ಮನೆಯ ಅಂಗಳದಲ್ಲಿ ನಳನಳಿಸುವ ಗಿಡಗಳ ಬುಡಕ್ಕೆ ಮನುಷ್ಯರು ತಿನ್ನುವ ಮಾತ್ರೆಗಳನ್ನು ಹಾಕುವುದನ್ನು ಎಲ್ಲಿಯಾದರೂ ನೋಡಿದ್ದೀರಾ?

ನಾನು ನೋಡಿದ್ದೇನೆ. ಅದು ದಾವಣಗೆರೆಯ ಬಂಧುಗಳ ಮನೆಯೊಂದರಲ್ಲಿ. ಪುಟ್ಟ ಪುಟ್ಟ ಕುಂಡಗಳಲ್ಲಿ ಅಲ್ಲಲ್ಲಿ ಮಾತ್ರೆಗಳನ್ನು ನೋಡಿ ಆಶ್ಚರ್ಯವಾಯಿತು. 'ಏನ್ರಿ ಆಂಟಿ... ನಿಮ್ಮ ಮನೆಯ ಫ್ಲವರ್‌ಪಾಟ್‌ನಲ್ಲಿ ಮಾತ್ರೆಗಳು... ನೀವು ಆರಾಮ್ ಇಲ್ದಾಗ ಔಷಧಿ, ಮಾತ್ರೆ ತಗೊಂಡಂಗೆ ನಿಮ್ಮನಿ ಗಿಡಗಳಿಗೂ ಗುಳಿಗೆ ಮಾತ್ರೆ ಕೊಡುಸ್ತಿರಾ' ಅಂದೆ.

ಅದಕ್ಕೆ ಅವರು 'ಏನ್ ಮಾಡೋದು... ದುಡ್ಡು ಕೊಟ್ಟು ತಂದಿದ್ದು. ತಗೊಬೇಕಂತಾ ನೋಡಿದ್ರೆ ಗುಳಿಗೆ ಅವಧಿ ಮುಗ್ದಾವಂತ ನಮ್ಮೋರು ಹೇಳಿದ್ರು... ಇನ್ನು ಅವನ್ನ ತಿನ್ನಂಗಿಲ್ಲ. ಅದ್ಯಾರೋ ಹೇಳಿದ್ರು, ಸುಮ್ಮನೆ ಫ್ಲವರ್ ಪಾಟಿನಲ್ಲಿ ಹಾಕಿದ್ರೆ ಗಿಡ, ಹೂಬಳ್ಳಿ ಚೆನ್ನಾಗಿ ಬೆಳಿತಾವಂತ. ಅದ್ಕೆ ಹಾಕಿದ್ದೀನಿ' ಅಂದ್ರು. ನನಗೆ ಅಚ್ಚರಿಯಾಯಿತು. ಆದರೆ ಗಿಡಗಳಿಗೆ ಮಾತ್ರೆ ಹಾಕಿದರೆ ಆಗುವ ಬೆಳವಣಿಗೆ ಕುರಿತು ವಿಜ್ಞಾನ ಏನು ಹೇಳುತ್ತದೋ ತಿಳಿಯದು.

—ಸೌಮ್ಯ ಶಿಗ್ಗಾಂವಕರ್, ಹಾಸನ

